ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉನಿ : ಸುಮಪ : 2018-19 :** **ದಿನಾಂಕ : 18-09-2018**

# <u>ಪತ್ರಿಕಾ ಆಮಂತ್ರಣ</u>

1.'ಹೋಮಿಯೋ ಭವನ'ದ ಶಿಲಾನ್ಯಾಸ ಸಮಾರಂಭ:

**<u>ಶಿಲಾನ್ಯಾಸ ನೆರವೇರಿಸುವವರು:</u>**

ಶಿವಾನಂದ ಎಸ್. ಎಸ್. ಪಾಟೀಲ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

**<u>ಮುಖ್ಯ ಅತಿಥಿಗಳು:</u>**

ಸುರೇಶ್ ಕುಮಾರ್, ಶಾಸಕರು, ರಾಜಾಜಿನಗರ ವಿಧಾನಸಭಾ ಕ್ಷೇತ್ರ.

**<u>ಅಧ್ಯಕ್ಷತೆ:</u>**

ನಾಡೋಜ ಡಾ. ಬಿ.ಟಿ. ರುದ್ರೇಶ್, ಅಧ್ಯಕ್ಷರು, ಕರ್ನಾಟಕ ಹೋಮಿಯೋಪತಿ ಮಂಡಳಿ

ದಿನಾಂಕ: 19-09-2018, ಬುಧವಾರ, ಸಮಯ: ಬೆಳಿಗ್ಗೆ 11.30 ಗಂಟೆಗೆ
ಸ್ಥಳ: ಕರ್ನಾಟಕ ಡ್ರಗ್ ಲಾಜಿಸ್ಟಿಕ್ ಅಂಡ್ ವೇರ್ ಹೌಸಿಂಗ್ ಸೊಸೈಟಿ ಆವರಣ,
ಕೆ.ಹೆಚ್.ಬಿ. ಕಾಲೋನಿ, ಮಾಗಡಿ ರಸ್ತೆ (ಅಂಡರ್ ಪಾಸ್ ಪಕ್ಕ) ಬೆಂಗಳೂರು – 79.

2. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
100ನೇ ರಾಜ್ಯ ಪರಿಷತ್ ಸಾಮಾನ್ಯ ಸಭೆ:

ಅಧ್ಯಕ್ಷತೆ:
ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಉಪಸ್ಥಿತಿ:
ಡಾ. ಪ್ರಮೋದ ದೇವಿ ಒಡೆಯರ್,
ಉಪ ಪೋಷಕರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ದಿನಾಂಕ: 19-09-2018, ಬುಧವಾರ, ಸಮಯ: ಬೆ. 11.30 ಗಂಟೆಗೆ
ಸ್ಥಳ: "ಕೊಂಡಜ್ಜಿ ಬಸಪ್ಪ ಸಭಾಂಗಣ", # 39, ಶಾಂತಿಗೃಹ, ಅರಮನೆ ರಸ್ತೆ,
ಬೆಂಗಳೂರು – 560 001.

3. ಬಿಬಿಎಂಪಿ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆ:

**ಶಂಕುಸ್ಥಾಪನೆ:**
ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಘನ ಉಪಸ್ಥಿತಿ:**
ಡಾ. ಜಿ. ಪರಮೇಶ್ವರ್, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಅಧ್ಯಕ್ಷತೆ:**
ಆರ್. ಸಂಪತ್‌ರಾಜ್, ಮಹಾಪೌರರು ಹಾಗೂ ಪೋಷಕರು, ಬಿಬಿಎಂಪಿ ಜಿಲ್ಲಾ ಸಂಸ್ಥೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಬೆಂಗಳೂರು.

ದಿನಾಂಕ: 19-09-2018, ಬುಧವಾರ, ಸಮಯ: ಬೆ. 11.30 ಗಂಟೆಗೆ
ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಕೇಂದ್ರ ಕಚೇರಿ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.

4. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸೇವೆಗಳನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ಒದಗಿಸಲು ಮತ್ತು ಕನ್ನಡೇತರರು ಕನ್ನಡ ಕಲಿಯಲು ಸಿದ್ಧಪಡಿಸಿರುವ ಜಾಲತಾಣ ಉದ್ಘಾಟನೆ:

ಡಾ ಜಯಮಾಲಾ ರಾಮಚಂದ್ರ,
ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವರು.

ದಿನಾಂಕ: 19-09-2018, ಬುಧವಾರ, ಸಮಯ: ಮಧ್ಯಾಹ್ನ 3.30 ಗಂಟೆಗೆ
ಸ್ಥಳ : ವಾರ್ತಾ ಸೌಧ, ನಂ 17, ಭಗವಾನ್ ಮಹಾವೀರ ರಸ್ತೆ (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು.

5. ಕನ್ನಡ ಪುಸ್ತಕ ಪ್ರಾಧಿಕಾರ:
ನಿಮ್ಮ ಮನೆಗೆ ನಮ್ಮ ಪುಸ್ತಕ

ಅತಿಥಿಗಳು:
ಡಾ: ಬಿ.ಟಿ. ಲಲಿತಾನಾಯಕ್,
ಹಿರಿಯ ಸಾಹಿತಿಗಳು

ಪುಸ್ತಕಗಳೊಂದಿಗೆ:
ಡಾ ವಸುಂಧರಾ ಭೂಪತಿ

ದಿನಾಂಕ: 19-9-2018, ಬುಧವಾರ, ಸಮಯ: ಸಂಜೆ 5-00 ಗಂಟೆಗೆ
ಸ್ಥಳ: ಬಿ.ಟಿ. ಲಲಿತಾನಾಯಕ್ ಅವರ ಮನೆಯಂಗಳ, 22, ಕ್ರಾಂತಿಪಥ,
1 ನೇ ಮುಖ್ಯ ರಸ್ತೆ, 2 ನೇ ಕ್ರಾಸ್, ಜುಡಿಷಿಯಲ್ ಆಫೀಸರ್ಸ್ ಕಾಲೋನಿ,
ರಾಜಮಹಲ್ ವಿಲಾಸ್, 2 ನೇ ಹಂತ, ಸಂಜಯನಗರ, ಬೆಂಗಳೂರು -94.

**ಸಂಖ್ಯೆ:1006/1106**

# ಪತ್ರಿಕಾ ಪ್ರಕಟಣೆ

## ಬಿದಿರಿನಿಂದ 1500 ಕ್ಕೂ ಹೆಚ್ಚು ಉಪಯೋಗಗಳು- ಸಚಿವ ಎಂ.ಸಿ. ಮನಗೋಳಿ

**ಬೆಂಗಳೂರು, ಸೆಪ್ಟೆಂಬರ್ 18 (ಕರ್ನಾಟಕ ವಾರ್ತೆ)**

**2018-19 ನೇ ಸಾಲಿನಲ್ಲಿ ರಾಷ್ಟ್ರೀಯ ಬಿದಿರು ಮಿಷನ್ ಯೋಜನೆಯಲ್ಲಿ ಬಿದಿರನ ಬಗ್ಗೆ ಪ್ರಚಾರ, ಸಂರಕ್ಷಣೆ ಮತ್ತು ಸಂಸ್ಕರಣೆಗೆ ಹಾಗೂ ಮಾರ್ಕೆಟಿಂಗ್ ಮತ್ತು ಕೌಶಲ್ಯಾಭಿವೃದ್ಧಿಗಾಗಿ ಒಟ್ಟು 28 ಕೋಟಿಯಷ್ಟು ಅನುದಾನವನ್ನು ಕೇಂದ್ರ ಸರ್ಕಾರ ರಾಜ್ಯಸರ್ಕಾರಕ್ಕೆ ಬಿಡುಗಡೆ ಮಾಡಿದೆ ಎಂದು ತೋಟಗಾರಿಕೆ ಸಚಿವ ಎಂ.ಸಿ. ಮನಗೋಳಿ ಅವರು ತಿಳಿಸಿದರು.**

**ವಿಶ್ವ ಬಿದಿರು ದಿನಾಚರಣೆ -2018 ರ ಅಂಗವಾಗಿ ಇಂದು ಅರಣ್ಯ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮ, ಬಿದಿರು ಬೆಳೆ ಕುರಿತ ಕಾರ್ಯಾಗಾರ ಹಾಗೂ ಬಿದಿರು ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು ಕರ್ನಾಟಕದಲ್ಲಿ ಈವರೆಗೆ ಅಂದಾಜು 15.766 ಹೆಕ್ಟೇರ್ ಅರಣ್ಯ ಪ್ರದೇಶ ಹಾಗೂ 588 ಹೆಕ್ಟೇರ್ ಅರಣ್ಯೇತರ ಪ್ರದೇಶದಲ್ಲಿ ಬಿದಿರು ನಡುತೋಪುಗಳನ್ನು ಬೆಳೆಸಲು 47.49 ಕೋಟಿ ರೂ. ಖರ್ಚು ಮಾಡಲಾಗಿದೆ.**

**ಬಿದಿರಿನಿಂದ 1500 ಕ್ಕೂ ಹೆಚ್ಚು ಉಪಯೋಗಗಳಿರುವುದು ಈಗಾಗಲೇ ಸಾಬೀತಾಗಿದ್ದು ಭವಿಷ್ಯದಲ್ಲಿ ಬಿದಿರಿಗೆ ಉತ್ತಮ ಬೇಡಿಕೆ ಬರಲಿದೆ, 135 ಕ್ಕೂ ಹೆಚ್ಚು ಬಿದಿರಿನ ವಿವಿಧ ತಳಿಗಳಿವೆ ಹಾಗೂ ಅತ್ಯಂತ ಹೆಚ್ಚು ಆಮ್ಲಜನಕವನ್ನು ಬಿಡುಗಡೆ ಮಾಡುವ ಮೂಲಕ ಪರಿಸರವನ್ನು ಸ್ವಚ್ಛವಾಗಿಡುತ್ತದೆ.**

**ಬಿದಿರು ಅರಣ್ಯ, ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಪಟ್ಟ ಬೆಳೆಯಾಗಿದ್ದು ಇದನ್ನು ರೈತರು ಹೆಚ್ಚಿನ ರೀತಿಯಲ್ಲಿ ಬೆಳೆಯುವಂತೆ ಪ್ರೋತ್ಸಾಹಿಸಲು ಈ ಎಲ್ಲಾ ಇಲಾಖೆಗಳು ಒಟ್ಟಾಗಿ ರೈತರೊಂದಿಗೆ ಕಾರ್ಯನಿರ್ವಹಿಸಬೇಕು.**

ನಮ್ಮ ದೇಶದಲ್ಲಿ ಶೇ. 75 ಕ್ಕೂ ಹೆಚ್ಚು ಜನ ಕೃಷಿ ಮಾಡುತ್ತಿದ್ದರೂ ಸಹ ಉಳಿದ ಕೇವಲ ಶೇ. 25 ರಷ್ಟು ಜನರಿಗೆ ಪೂರ್ಣವಾಗಿ ಉತ್ತಮ ಆಹಾರವನ್ನು ನೀಡಲಾಗುತ್ತಿಲ್ಲ. ಕೆಲವೊಂದು ದೇಶಗಳಲ್ಲಿ ಕೇವಲ 25 ರಷ್ಟು ಜನ ಕೃಷಿ ಮಾಡುತ್ತಿದ್ದರೂ ಸಹ ಉಳಿದ ಶೇ. 75 ರಷ್ಟು ಜನರಿಗೆ ಆಹಾರವನ್ನು ಪೂರೈಸಿ ಅನ್ಯದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಈ ಕುರಿತು ಪ್ರತಿಯೊಬ್ಬರು ಗಂಭೀರವಾಗಿ ಯೋಚಿಸುವ ಅಗತ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಪಡೆ ಮುಖ್ಯಸ್ಥ ಪುನಟಿ ಶ್ರೀಧರ್ ಅವರು ವಹಿಸಿದ್ದರು. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎಸ್. ಶಾಂತಪ್ಪ ಅವರು ಪ್ರಾಸ್ಥಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಎ. ದೇವೇಗೌಡ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವನ್ಯಜೀವಿ ಪರಿಪಾಲಕರಾದ ಸಿ. ಜಯರಾಂ ಅವರು ಸೇರಿದಂತೆ ಉನ್ನತಾಧಿಕಾರಿಗಳು ಉಪಸ್ಥಿತರಿದ್ದರು.

**ಸಂಖ್ಯೆ:1007/1107**

**ಸಚಿವರ ಪ್ರವಾಸ**

**ಬೆಂಗಳೂರು, ಸೆಪ್ಟೆಂಬರ್ 18 (ಕರ್ನಾಟಕ ವಾರ್ತೆ)**

ಕೃಷಿ ಸಚಿವ ಎನ್.ಹೆಚ್. ಶಿವಶಂಕರ ರೆಡ್ಡಿ ಅವರು ಸೆಪ್ಟೆಂಬರ್ 19 ರವರೆಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಸೆಪ್ಟೆಂಬರ್ 20 ರಂದು ಬೆಂಗಳೂರಿಗೆ ಹಿಂತಿರುಗುವರು.

**ಸಂಖ್ಯೆ:1008/1108**

## ಪೊಲೀಸ್ ಸಬ್‌–ಇನ್‌ಪೆಕ್ಟರ್ ಹುದ್ದೆಗೆ ಲಿಖಿತ ಪರೀಕ್ಷೆ

ಬೆಂಗಳೂರು, ಸೆಪ್ಟೆಂಬರ್ 18 (ಕರ್ನಾಟಕ ವಾರ್ತೆ)

ಪೊಲೀಸ್ ಸಬ್‌–ಇನ್ಸ್‌ಪೆಕ್ಟರ್ ಹುದ್ದೆಗಳಿಗೆ (ಎಫ್.ಪಿ.ಬಿ) ಸೆಪ್ಟೆಂಬರ್ 23 ರಂದು ರಂದು ಬೆಳಿಗ್ಗೆ 9.00 ರಿಂದ 10.30 ರವರೆಗೆ ಮತ್ತು 11.30 ರಿಂದ 1.00 ರವರೆಗೆ ಎರಡು ಅವಧಿಯಲ್ಲಿ ಸರ್ಕಾರಿ ರಾಂ ನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ರೇಸ್‌ಕೋರ್ಸ್.

ಬೆಂಗಳೂರು – 560 001 ಈ ಪರೀಕ್ಷಾ ಕೇಂದ್ರದಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಬೆರಳು ಮುದ್ರೆ ಸಂಗ್ರಾಹಲಯದ ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1009/1109**

# ಶಾಸಕರ ವಾಹನಗಳಿಗೆ
# ಸಚಿವಾಲಯದ ಪಾಸ್ ಕಡ್ಡಾಯವಾಗಿ ಅಂಟಿಸಲು ಪತ್ರ

ಬೆಂಗಳೂರು, ಸೆಪ್ಟೆಂಬರ್ 18 (ಕರ್ನಾಟಕ ವಾರ್ತೆ)

ರಾಜ್ಯದ ಎರಡೂ ಸದನಗಳ ಸದಸ್ಯರು ಮತ್ತು ಮಾಜಿ ಸದಸ್ಯರ ಗೌರವ ಮತ್ತು ಹಿತ ಕಾಪಾಡುವ ದೃಷ್ಠಿಯಿಂದ ಇನ್ನು ಮುಂದೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಸಚಿವಾಲಯದಿಂದ ವಿತರಿಸಲಾಗಿರುವ ವಾಹನ ಪಾಸ್‌ಗಳನ್ನು ಕಡ್ಡಾಯವಾಗಿ ತಮ್ಮ ವಾಹನಗಳಿಗೆ ಅಂಟಿಸುವುದು ಸೂಕ್ತವಾಗಿರುತ್ತದೆ ಸಚಿವಾಲಯದಿಂದ ಶಾಸಕರುಗಳಿಗೆ ಪತ್ರ ಬರೆಯಲಾಗಿದೆ.

ಈ ಕುರಿತು ವಿಧಾನಸಭೆ ಸಭಾಧ್ಯಕ್ಷರಾದ ಕೆ.ಆರ್.ರಮೇಶ್ ಕುಮಾರ್ ಮತ್ತು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಜಂಟಿಯಾಗಿ ಬರೆದಿರುವ ಪತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಹೆದ್ದಾರಿಗಳಲ್ಲಿರುವ ಟೋಲ್‌ಗಳಲ್ಲಿ ಉಭಯ ಸದನಗಳ ಶಾಸಕರು/ಮಾಜಿ ಶಾಸಕರಲ್ಲದವರು ಅಲ್ಲಿನ ಸಿಬ್ಬಂದಿಗಳಿಗೆ ತಾವು ಶಾಸಕರು/ಮಾಜಿ ಶಾಸಕರೆಂದು ಹೇಳಿಕೊಂಡು ಟೋಲ್ ಶುಲ್ಕವನ್ನು ಪಾವತಿಸದೆ ಹಲ್ಲೆ ನಡೆಸುತ್ತಿರುವುದು ಸಚಿವಾಲಯದ ಗಮನಕ್ಕೆ ಬಂದಿರುತ್ತದೆ.

ಇದರ ಜೊತೆಗೆ ಯಾವುದೇ ಮಾನ್ಯತೆ ಇಲ್ಲದ ಸ್ವಯಂ ಘೋಷಿತ ಸಂಸ್ಥೆಗಳ ಮುಖಂಡರು ಖಾಸಗಿ ವಾಹನಗಳಿಗೆ ತಮ್ಮ ನಾಮಫಲಕಗಳನ್ನು ಸರ್ಕಾರಿ ವಾಹನದಂತೆ ಬಿಂಬಿತವಾಗುವ ರೀತಿಯಲ್ಲಿ ಹಾಕಿಕೊಂಡು ಟೋಲ್‌ಗಳಲ್ಲಿ ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಮತ್ತು ಅಲ್ಲಲ್ಲಿ ಇಂತಹ ಮುಖಂಡರು ಟೋಲ್ ಸಿಬ್ಬಂದಿಗಳ ಮೇಲೆ ದೌರ್ಜನ್ಯ ಎಸಗುತ್ತಿರುವುದು ಸಹ ಕಂಡು ಬಂದಿರುತ್ತದೆ. ಈ ರೀತಿಯ ಎರಡೂ ಪ್ರಯತ್ನಗಳು ಕ್ರಿಮಿನಲ್ ಅಪರಾಧವಾಗುತ್ತದೆ.

ಈ ಎಲ್ಲಾ ಕಾರಣಗಳಿಂದ ರಾಜ್ಯದ ಎರಡೂ ಸದನಗಳ ಗೌರವಾನ್ವಿತ ಸದಸ್ಯರು ಮತ್ತು ಮಾಜಿ ಸದಸ್ಯರ ಗೌರವ ಮತ್ತು ಹಿತ ಕಾಪಾಡುವ ದೃಷ್ಠಿಯಿಂದ ನಾವೆಲ್ಲರೂ ಇನ್ನು ಮುಂದೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಸಚಿವಾಲಯದಿಂದ ವಿತರಿಸಲಾಗಿರುವ ವಾಹನ ಪಾಸ್‌ಗಳನ್ನು ಕಡ್ಡಾಯವಾಗಿ ತಮ್ಮ ವಾಹನಗಳಿಗೆ ಅಂಟಿಸುವುದು ಸೂಕ್ತವಾಗಿರುತ್ತದೆ.

ಒಂದು ವೇಳೆ ಈ ರೀತಿ ಆದ ನಂತರವೂ ಯಾವುದಾದರೂ ಟೋಲ್‌ಗಳಲ್ಲಿ ಇಂತಹ ವಾಹನ ಪಾಸ್‌ಗಳಿಗೆ ಮನ್ನಣೆ ನೀಡದಿದ್ದಲ್ಲಿ ಅಥವಾ ಸಹಕರಿಸದಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಸಚಿವಾಲಯದ ಗಮನಕ್ಕೆ ತರುವಂತೆ ವಿನಂತಿಸುತ್ತೇವೆ.

ರಾಜ್ಯದ ಅಭಿವೃದ್ಧಿಗಾಗಿ ಸಹಕರಿಸಲು ಮುಂದೆ ಬಂದಿರುವ ಖಾಸಗಿ ಟೋಲ್ ಕಂಪನಿಗಳಿಗಾಗಲೀ ಅಥವಾ ಮಾನ್ಯ ಶಾಸಕರು ಹಾಗೂ ಮಾಜಿ ಶಾಸಕರಿಗೆ ಯಾವುದೇ ರೀತಿಯಲ್ಲಿಯೂ ಮುಜುಗರವಾಗಬಾರದೆಂದು ತಿಳಿಸುತ್ತಾ ಉಭಯ ಸದನಗಳ ಗೌರವ ಕಾಪಾಡಲು ನಾವೆಲ್ಲ ಶ್ರಮಿಸೋಣವೆಂದು ಸಭಾಪತಿಗಳು ಪತ್ರದಲ್ಲಿ ತಿಳಿಸಿದ್ದಾರೆ.

**ಸಂಖ್ಯೆ:1010/1110**

# ಕನ್ನಡೇತರರು ಕನ್ನಡ ಕಲಿಯಲು ನೂತನ ಜಾಲತಾಣ ಸಚಿವೆ ಡಾ: ಜಯಮಾಲ ಅವರಿಂದ ಚಾಲನೆ

ಬೆಂಗಳೂರು, ಸೆಪ್ಟೆಂಬರ್ 18 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸೇವೆಗಳನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ಒದಗಿಸಲು ಮತ್ತು ಕನ್ನಡೇತರರು ಕನ್ನಡ ಕಲಿಯಲು ಸಿದ್ಧಪಡಿಸಿರುವ ನೂತನ ಜಾಲತಾಣವನ್ನು ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಸಚಿವೆ ಡಾ ಜಯಮಾಲ ರಾಮಚಂದ್ರ ಅವರು ಸೆಪ್ಟೆಂಬರ್ 19 ರಂದು ಚಾಲನೆ ನೀಡಲಿದ್ದಾರೆ.

ನಗರದ ಇನ್‌ಫೆಂಟ್ರಿ ರಸ್ತೆಯಲ್ಲಿರುವ ವಾರ್ತಾ ಸೌಧದಲ್ಲಿ ಮಧ್ಯಾಹ್ನ 3.30 ಗಂಟೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎನ್.ಆರ್.ವಿಶುಕುಮಾರ್ ಅವರು ಉಪಸ್ಥಿತರಿರುವರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಸಕ್ರಿಯವಾಗಿರುವ ಕನ್ನಡ ಅಧ್ಯಯನ ಪೀಠವು ಕನ್ನಡೇತರರು ಕನ್ನಡವನ್ನು ಕಲಿಯಲು ಸಹಾಯ ಮಾಡುವಂತಹ ಹೊಸ ಬಗೆಯ ಜಾಲ ತಾಣವನ್ನು ಸಿದ್ಧಪಡಿಸಲಾಗಿದೆ.